ಶೋಭಾ ಕರಂದ್ಲಾಜೆ :– (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಸಚಿವರು):–

ಅ) ಹೌದು.

ಆ) ದಿನಾಂಕ: 18.11.2011 ರಿಂದ ಪಡಿತರ ಚೀಟಿಗಾಗಿ "ಆನ್‌ಲೈನ್" ಮೂಲಕ ಅರ್ಜಿಗಳನ್ನು ಸ್ವೀಕರಿಸಲಾಗುತ್ತಿದೆ. ನಗರ/ಪಟ್ಟಣ ಪ್ರದೇಶದಲ್ಲಿ ಅರ್ಜಿಗಳನ್ನು ಇಲಾಖೆಯ ವೆಬ್ ಸೈಟ್ ಮೂಲಕ ಅಥವಾ ತಾಲ್ಲೂಕು ಕಛೇರಿಗಳಿಗೆ ಮತ್ತು ಉಪ ನಿರ್ದೇಶಕರು ಕಛೇರಿಗೆ ಹೋಗಿ ಆನ್‌ಲೈನ್ ಆಗಿ ಸಲ್ಲಿಸಬಹುದಾಗಿದೆ. ಗ್ರಾಮಾಂತರ ಪ್ರದೇಶದ ಜನರು ಸಂಬಂಧಿಸಿದ ಗ್ರಾಮ ಪಂಚಾಯಿತಿ ಕಛೇರಿಗೆ ಹೋಗಿ ಕಂಪ್ಯೂಟರ್‌ನ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿಗಳನ್ನು ನಿಯಮಾನುಸಾರ ಸ್ಥಳ ತನಿಖೆ ಮಾಡಿ ಅರ್ಹತೆ ಆಧಾರದ ಮೇಲೆ ಪಡಿತರ ಚೀಟಿಗಳನ್ನು ಆದಷ್ಟು ಬೇಗನೆ ನೀಡಲಾಗುವುದು.

ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿನ ರಿಸೀವಿಂಗ್ ಸ್ಟೇಷನ್‌ಗಳನ್ನು ಕುರಿತು

183 (81) ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ) :– ಇಂಧನ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ತೀರ್ಥಹಳ್ಳಿ ವಿಧಾನ ಸಭಾ ಕ್ಷೇತ್ರದಲ್ಲಿ ವಿದ್ಯುಚ್ಛಕ್ತಿ ಸರಬರಾಜು ಪೂರ್ಣ ಕೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಕಮ್ಮರಡಿ ಮತ್ತು ಕೊಣಂದೂರು ಸಬ್ ಸ್ಟೇಷನ್ ಯಾವಾಗ ಕಾರ್ಯ ನಿರ್ವಹಿಸುತ್ತವೆ, ಅವುಗಳು ಕಾರ್ಯಾರಂಭಗೊಳ್ಳಲು ಅಡ್ಡಿ ಆತಂಕಗಳೇನು;

ಆ) ನಗರ, ಸಂಪೆಕಟ್ಟೆ, ರಿಪ್ಪನ್‌ಪೇಟೆ ಮತ್ತು ಮಂಡಗದ್ದೆಯಲ್ಲಿ ಸಬ್ ಸರ್ವಿಸ್ ಸ್ಟೇಷನ್ ಸ್ಥಾಪಿಸಲು ಸರ್ಕಾರಕ್ಕಿರುವ ಅಡೆತಡೆಗಳೇನು;

ಇ) ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ಲೈನ್‌ಮನ್‌ಗಳ ಟಿ.ಸಿ.ಗಳ ವಿದ್ಯುತ್ ಕಂಬಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿವೆಯೆ;

ಈ) ಮೇಲ್ಕಂಡ ಕೊರತೆ ನೀಗಲು ಸರ್ಕಾರಕ್ಕೆ ಹಣದ ಕೊರತೆಯೇ ಅಥವಾ ಸರ್ಕಾರಕ್ಕೆ ಮಾಹಿತಿ ಇಲ್ಲವೆ?

ಶೋಭಾ ಕರಂದ್ಲಾಜೆ :– (ಇಂಧನ ಸಚಿವರು):–

ಅ) ಹೌದು, ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ವ್ಯಾಪ್ತಿಯ ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ ವಿಶೇಷವಾಗಿ ತೀರ್ಥಹಳ್ಳಿ ತಾಲ್ಲೂಕಿನಲ್ಲಿ, 110/11 ಕೆ.ವಿ. ತೀರ್ಥಹಳ್ಳಿ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಡುವ 11 ಕೆ.ವಿ. ಮಾರ್ಗಗಳು ಸುಮಾರು 35.00 ಕಿ.ಮೀ.ವರೆಗೆ ವಿಸ್ತಾರಗೊಂಡಿದ್ದು, ಈ ಮಾರ್ಗಗಳ ಅಂತಿಮ ಭಾಗಗಳಲ್ಲಿ ಲೋ ವೋಲ್ಟೇಜ್ ಸಮಸ್ಯೆ ಇರುತ್ತದೆ ಹಾಗೂ ಮಳೆಗಾಲದ ಅವಧಿಯಲ್ಲಿ ವಿದ್ಯುತ್ ಮಾರ್ಗದ ಅಕ್ಕಪಕ್ಕ ಇರುವ ಮರದ ಕೊಂಬೆಗಳು ವಿಪರೀತ ಗಾಳಿಗೆ ಆಕಸ್ಮಿಕವಾಗಿ ಮುರಿದು ಬೀಳುವುದರಿಂದ ವಿದ್ಯುತ್ ಸರಬರಾಜಿನಲ್ಲಿ ಅಡಚಣೆ ಉಂಟಾಗಿರುವುದು ಕಂಡುಬಂದಿದೆ.

ಈಗಾಗಲೇ ಪ್ರಗತಿಯಲ್ಲಿರುವ ಕೊಣಂದೂರು ಮತ್ತು ಕಮ್ಮರಡಿ ವಿದ್ಯುತ್ ಉಪ ಕೇಂದ್ರಗಳು ಕಾರ್ಯಾರಂಭ ಮಾಡಿದ ನಂತರ ಈ ಸಮಸ್ಯೆಗಳು ಬಗೆಹರಿಯಬಹುದು.

ಕಮ್ಮರಡಿ ಮತ್ತು ಕೊಣಂದೂರು ವಿದ್ಯುತ್ ಉಪ ಕೇಂದ್ರಗಳ ಕಾಮಗಾರಿಗಳ ವಿವರಗಳು:–

ಉದ್ದೇಶಿತ 110/11 ಕೆ.ವಿ. ವಿದ್ಯುತ್ ಕೇಂದ್ರ ಕಮ್ಮರಡಿಯ ಕಾಮಗಾರಿ:

ಕಮ್ಮರಡಿಯಲ್ಲಿ ನಿರ್ಮಿಸುತ್ತಿರುವ 1 * 10 ಎಂ.ವಿ.ಎ. 110/11 ಕೆ.ವಿ., ವಿದ್ಯುತ್ ವಿತರಣಾ ಕೇಂದ್ರದ ಕಾಮಗಾರಿಯು ಶೇಕಡ 80 ರಷ್ಟು ಮುಕ್ತಾಯಗೊಂಡಿರುತ್ತದೆ. 110 ಕೆ.ವಿ. ಮಾರ್ಗ ನಿರ್ಮಾಣದ ಕಾಮಗಾರಿಯ 11 ಕಿ.ಮೀ. ಮಾರ್ಗದಲ್ಲಿ 47 ಗೋಪುರಗಳಿದ್ದು, 27 ಗೋಪುರಗಳ ರಚನೆಯನ್ನು ಈಗಾಗಲೇ ಪೂರ್ಣಗೊಳಿಸಲಾಗಿದೆ. ಉಳಿದ 20 ಗೋಪುರಗಳ ಕೆಲಸವನ್ನು ಕೈಗೆತ್ತಿಕೊಳ್ಳಲು 110 ಕೆ.ವಿ. ಮಾರ್ಗವು ಗದ್ದೆಗಳ ಮುಖಾಂತರ ಹಾದು ಹೋಗಬೇಕಾಗಿದ್ದು, ಪ್ರಸ್ತುತ ಭತ್ತದ ಬೆಳೆ ಬೆಳೆದಿದ್ದು, ಲೈನ್ ಎಳೆಯಲು ಕಷ್ಟ ಸಾಧ್ಯವಾಗಿದೆ. ಭತ್ತದ ಬೆಳೆಯನ್ನು ಡಿಸೆಂಬರ್ 2011/ಜನವರಿ 2012ರ ತಿಂಗಳಿನಲ್ಲಿ ಕಟಾವು ಮಾಡಲಾಗುವುದರಿಂದ, ಕಟಾವಿನ ನಂತರ ಕಾಮಗಾರಿಯನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸಿ, ವಿದ್ಯುತ್ ವಿತರಣಾ ಕೇಂದ್ರವನ್ನು ಚಾಲನೆಗೊಳಿಸಲಾಗುವುದು.

ಉದ್ದೇಶಿತ 110/11 ಕೆ.ವಿ. ವಿದ್ಯುತ್ ಕೇಂದ್ರ ಕೊಣಂದೂರಿನ ಕಾಮಗಾರಿ:

ಕೊಣಂದೂರಿನಲ್ಲಿ ನಿರ್ಮಿಸುತ್ತಿರುವ 1 * 10 ಎಂ.ವಿ.ಎ. 110/11 ಕೆ.ವಿ., ವಿದ್ಯುತ್ ವಿತರಣಾ ಕೇಂದ್ರದ ಕಾಮಗಾರಿಯು ಶೇಕಡ 80 ರಷ್ಟು ಮುಕ್ತಾಯಗೊಂಡಿರುತ್ತದೆ. ಈ ಉಪ ಕೇಂದ್ರಕ್ಕೆ ಸಂಪರ್ಕ ಕಲ್ಪಿಸುವ 110 ಕೆ.ವಿ. ಮಾರ್ಗದ ಉದ್ದ 11,832 ಕಿ.ಮೀ.

ಆಗಿದ್ದು, ಸದರಿ ಮಾರ್ಗವು ಸಂಪೂರ್ಣ ರಕ್ಷಿತಾರಣ್ಯ ಪ್ರದೇಶದಲ್ಲಿ ಹಾದು ಹೋಗಬೇಕಾಗಿರುವುದರಿಂದ ಮಾರ್ಗವನ್ನು ನಿರ್ಮಿಸಲು ಒಟ್ಟು 23.1 ಹೆಕ್ಟೇರ್ ಅರಣ್ಯ ಭೂಮಿಗೆ ಅರಣ್ಯ ಇಲಾಖೆಯಿಂದ ಅನುಮೋದನೆ ದೊರೆಯಬೇಕಾಗಿದೆ. ಮೊದಲನೇ ಹಂತದಲ್ಲಿ 18.15 ಹೆಕ್ಟೇರ್ ಅರಣ್ಯ ಭೂಮಿಗೆ ಕೇಂದ್ರ ಸರ್ಕಾರದಿಂದ ಅನುಮೋದನೆ ದೊರೆತಿದ್ದು, 2ನೇ ಹಂತದಲ್ಲಿ 4.95 ಹೆಕ್ಟೇರ್ ಅರಣ್ಯ ಭೂಮಿಗೆ ಅನುಮೋದನೆ ದೊರೆಯಬೇಕಾಗಿದೆ. ಈ ವಿಷಯದ ಬಗ್ಗೆ ದಿನಾಂಕ: 3-11-2011 ರಂದು ಬೆಂಗಳೂರಿನ ಪರಿಸರ ಮತ್ತು ಅರಣ್ಯ ಇಲಾಖೆ ಕಛೇರಿಯಲ್ಲಿ ಸಭೆ ನಡೆದಿದ್ದು, ಸದರಿ ಭೂಮಿ ಮಂಜೂರು ಕೋರಿ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಕೇಂದ್ರ ಸರ್ಕಾರದಿಂದ ಅನುಮೋದನೆ ದೊರೆತ ಕೂಡಲೇ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು ಹಾಗೂ ಪ್ರಸ್ತುತ ಗುತ್ತಿಗೆದಾರರಾದ ಮೆ: ಬರೂಕ ಪವರ್ ಕಾರ್ಪೊರೇಷನ್ ಲಿ. ಬೆಂಗಳೂರು ಇವರು ಲೈನ್ ಕಾಮಗಾರಿ ಬಗ್ಗೆ ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರಿನಲ್ಲಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ ವಿರುದ್ಧ ಆರ್ಬಿಟ್ರೇಟರ್ ನೇಮಕಾತಿಗೆ ಸಂಬಂಧಿಸಿದಂತೆ ಸಿ.ಎಂ.ಪಿ. 42/2011 ಅಡಿಯಲ್ಲಿ ದಾವೆಯನ್ನು ಹೂಡಿದ್ದು, ಶ್ರೀ ಶಿವಶಂಕರ ಭಟ್, ನಿವೃತ್ತ ನ್ಯಾಯಾಧೀಶರು ಇವರನ್ನು ಆರ್ಬಿಟ್ರೇಟರ್ ಆಗಿ ಕಾರ್ಯನಿರ್ವಹಿಸಲು ಕರ್ನಾಟಕ ಉಚ್ಚ ನ್ಯಾಯಾಲಯವು ಆದೇಶಿಸಿರುತ್ತದೆ. ಆರ್ಬಿಟ್ರೇಷನ್ ನಡವಳಿ ಪ್ರಾರಂಭವಾಗಬೇಕಿರುತ್ತದೆ.

ಆ) ನಗರ, ಸಂಪೆಕಟ್ಟೆ, ರಿಪ್ಪನ್‌ಪೇಟೆ ಗ್ರಾಮಗಳಲ್ಲಿ ವಿದ್ಯುತ್ ಉಪಕೇಂದ್ರಗಳನ್ನು ಸ್ಥಾಪಿಸುವ ಕುರಿತು ಅದರ ತಾಂತ್ರಿಕ ಸಾಧ್ಯತೆಗಳನ್ನು ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು. ಮಂಡಗದ್ದೆ ಗ್ರಾಮದಲ್ಲಿ ವಿದ್ಯುತ್ ಉಪಕೇಂದ್ರವನ್ನು ಸ್ಥಾಪಿಸಲು ಯಾವುದೇ ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ.

ಇ) ಮತ್ತು

ಈ) ತೀರ್ಥಹಳ್ಳಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮಂಜೂರಾದ ಕಾಮಗಾರಿಗಳಿಗೆ ಯಾವುದೇ ಟ್ರಾನ್ಸ್‌ಫಾರ್ಮರ್‌ಗಳ ಮತ್ತು ಕಂಬಗಳ ಕೊರತೆ ಇರುವುದಿಲ್ಲ. ಲೈನ್‌ಮನ್‌ಗಳ ಕೆಲವು ಹುದ್ದೆಗಳು ಬಹಳ ಸಮಯದಿಂದ ಖಾಲಿ ಇದ್ದು, ನೇಮಕಾತಿ ಪ್ರಕ್ರಿಯೆಯು ಪ್ರಗತಿಯಲ್ಲಿದೆ. ಈ ಕಾಮಗಾರಿಗಳಿಗೆ ಹಣದ ಕೊರತೆ ಇರುವುದಿಲ್ಲ.

ತುಂಗಳ ಗುಡ್ಡದ ಮೇಲೆ ಗಾಳಿ ವಿದ್ಯುತ್ ಯಂತ್ರ ಅಳವಡಿಕೆ